ಅತ್ಯಾವಶ್ಯಕ 11 ಪಡಿತರ ವಸ್ತುಗಳನ್ನು ನೀಡುವ ಸಲುವಾಗಿ ಸರ್ವಪ್ರಿಯಾ ಯೋಜನೆಯನ್ನು ಪ್ರಾರಂಭಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಆ) ಈ ಯೋಜನೆಯ ಮೇಲೆ ಯಾವ ಯಾವ ಸ್ಥಳಗಳಲ್ಲಿ ಈಗಾಗಲೇ ಸಾರ್ವಜನಿಕ ಪಡಿತರ ಯೋಜನೆಯವರಿಗೆ ಈ ವಸ್ತುಗಳನ್ನು ಹಂಚಲು ಕ್ರಮ ಕೈಗೊಳ್ಳಲಾಗಿದೆ?

ಇ) ಈ ಯೋಜನೆಯನ್ನು ಪ್ರಾರಂಭಿಸುವುದರಿಂದ ರಾಜ್ಯ ಸರ್ಕಾರಕ್ಕೆ ತಗಲುವ ನಷ್ಟ ಎಷ್ಟು?

ಈ) ಕೇಂದ್ರ ಸರ್ಕಾರದ ನೆರವಿನೊಂದಿಗೆ ಇರುವ ಈ ಯೋಜನೆಯನ್ನು ಎಂದಿನಿಂದ ಯಾರಿಗೆ ತರಲಾಗುವುದು?

ಶ್ರೀ ಡಿ.ಬಿ. ಇನಾಂದಾರ್ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು) :

ಅ) "ಸರ್ವಪ್ರಿಯಾ" ಯೋಜನೆಯ ಮಾದರಿಯದೇ ಆದ 'ಕಾಮ್ ನ್ಯಾಪ್' ಎಂಬ ಯೋಜನೆಯನ್ನು ರಾಜ್ಯ ಸರ್ಕಾರದ ಸ್ವಾಮ್ಯದ ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮದ ಮುಖಾಂತರ ದಿ. 24.7.2000ರಿಂದ ಜಾರಿಗೆ ತಂದಿರುತ್ತದೆ. ಈ ಯೋಜನೆಯಲ್ಲಿ 'ಸರ್ವ ಪ್ರಿಯಾ' ಯೋಜನೆಯಡಿಯಲ್ಲಿರುವ ವಸ್ತುಗಳನ್ನು ಒಳಗೊಂಡಂತೆ ದಿನ ನಿತ್ಯ ಬಳಕೆಗೆ ಅತ್ಯಾವಶ್ಯಕವಾದ 15 ವಸ್ತುಗಳನ್ನು ಮುಕ್ತ ಮಾರುಕಟ್ಟೆ ದರಕ್ಕಿಂತ ಕಡಿಮೆ ದರದಲ್ಲಿ ಸರಬರಾಜು ಮಾಡಲಾಗುತ್ತಿದೆ.

ಆ) 'ಕಾಮ್ ನ್ಯಾಪ್' ಯೋಜನೆಯನ್ನು ರಾಜ್ಯದ ಎಲ್ಲಾ ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮದ ನ್ಯಾಯ ಬೆಲೆ ಅಂಗಡಿಗಳಲ್ಲಿಯೂ ಹಾಗೂ ಕೆಲವು ಜಿಲ್ಲೆಗಳ ಆಯ್ದ ಪ್ರಮುಖ ನ್ಯಾಯಬೆಲೆ ಅಂಗಡಿಗಳ ಮುಖಾಂತರವೂ ಸಾರ್ವಜನಿಕರಿಗೆ ವಸ್ತುಗಳನ್ನು ವಿತರಣೆ ಮಾಡಲಾಗುತ್ತಿದೆ. ಈ ಯೋಜನೆಯ ಜನಪ್ರಿಯತೆಯನ್ನು ಆಧರಿಸಿ ಉಳಿದ ನ್ಯಾಯಬೆಲೆ ಅಂಗಡಿಗಳ ಮೂಲಕವೂ ಹಂಚಿಕೆ ಮಾಡಲು ನಿಗಮವು ಉದ್ದೇಶಿಸಿದೆ.

ಇ) ಈ ವಸ್ತುಗಳಿಗೆ ರಾಜ್ಯ ಸರ್ಕಾರವು ಯಾವುದೇ ಸಹಾಯಧನ ಒದಗಿಸುವುದಿಲ್ಲವಾದ ಕಾರಣ ನಷ್ಟ ಸಂಭವಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) 'ಸರ್ವ ಪ್ರಿಯಾ' ಮಾದರಿಯದೇ ಆದ 'ಕಾಮ್ ನ್ಯಾಪ್' ಯೋಜನೆಯನ್ನು ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮದ ವತಿಯಿಂದ ದಿನಾಂಕ 24.7.2000ರಿಂದ ಜಾರಿಗೆ ತರಲಾಗಿದೆ. ಈ ಯೋಜನೆಗೆ ಕೇಂದ್ರ ಸರ್ಕಾರದ ಯಾವ ನೆರವು, ನಿರ್ದೇಶನವೂ ಇಲ್ಲ.

ಮಲಪ್ರಭಾ- ಮತ್ತು ಘಟಪ್ರಭಾ ಯೋಜನೆಗಳು

4482 - ಶ್ರೀ ಕೌಜಲಗಿ ಮಹಾಂತೇಶ ಶಿವಾನಂದ (ಬೈಲಹೊಂಗಲ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ವರ್ಷ ಹಾಗೂ ಈ ವರ್ಷದ ಆಯವ್ಯಯದಲ್ಲಿ ಮಲಪ್ರಭಾ ಹಾಗೂ ಘಟಪ್ರಭಾ ಯೋಜನೆಗಳಿಗೆ ಒದಗಿಸಲಾದ ಹಣ ಎಷ್ಟು?

ಅ) ಆ ಪೈಕಿ ಈಗಾಗಲೇ ಎಷ್ಟು ಮೊತ್ತವನ್ನು ಖರ್ಚು ಮಾಡಲಾಗಿದೆ? (ಜಿಲ್ಲಾವಾರು ಮಾಹಿತಿ ಒದಗಿಸುವುದು).

ಇ) ಈ ಯೋಜನೆಗಳು ಪೂರ್ಣ ಮುಗಿಯದೇ ಇರುವುದರಿಂದ ಸಾರ್ವಜನಿಕರ ಮೇಲೆ ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಈ ಯೋಜನೆಯ ಕಾಮಗಾರಿಗಳನ್ನು ಪೂರ್ಣ ಮುಗಿಸಲು ಸರ್ಕಾರ ಯಾವ ಯಾವ ಕ್ರಮ ಕೈಗೊಳ್ಳುವುದು?

ಶ್ರೀ ಎಚ್.ಕೆ. ಪಾಟೀಲ್ (ಭಾರಿ ಮತ್ತ ಮಧ್ಯಮ ನೀರಾವರಿ ಸಚಿವರು) :

ಅ)

ಯೋಜನೆ	ಕಳೆದ ವರ್ಷ ಹಾಗೂ ಈ ವರ್ಷ ಒದಗಿಸಲಾದ ಅನುದಾನ (ಲಕ್ಷ ರೂ.ಗಳಲ್ಲಿ)	
	1999-2000	2000-01
ಮಲಪ್ರಭಾ	8347.00	8300.00
ಘಟಪ್ರಭಾ	10316.00	23500.00
ಒಟ್ಟು	**18663.00**	**31800.00**

ಆ)

ವರ್ಷ/ ಯೋಜನೆ	ಜಿಲ್ಲಾವಾರು ವೆಚ್ಚವಾದ ಹಣ (ಲಕ್ಷ ರೂ.ಗಳಲ್ಲಿ)					
	ಧಾರವಾಡ	ಗದಗ	ಬೆಳಗಾವಿ	ಬಾಗಲಕೋಟೆ	ವಿಜಾಪುರ	ಒಟ್ಟು
1999-2000						
ಮಲಪ್ರಭಾ	973. 46	1334.43	1380.80	862.30	79.27	4630.26
ಘಟಪ್ರಭಾ	-	-	4353.78	586.80		4940.58
ಒಟ್ಟು	973.46	1334.43	5734.58	1449.10	79.27	9570.84
2000-2001 (ಸೆಪ್ಟೆಂಬರ್ 2000ದ ವರೆಗೆ) 9:2000ವರೆಗೆ						
ಮಲಪ್ರಭಾ	331.76	359.74	502.14	220.64	5.68	1419.96
ಘಟಪ್ರಭಾ	-	-	1602.23	251.38		1853.61
ಒಟ್ಟು	331.76	359.74	2104.37	472.02	5.68	3273.57

ಇ) ಬಂದಿದೆ.

ಈ) ಮಲಪ್ರಭಾ ಹಾಗೂ ಘಟಪ್ರಭಾ ಯೋಜನೆಗಳನ್ನು ತ್ವರಿತವಾಗಿ ಪೂರ್ಣಗೊಳಿಸುವ ಉದ್ದೇಶದಿಂದ ಈ ಯೋಜನೆಗಳನ್ನು ಕರ್ನಾಟಕ ನೀರಾವರಿ ನಿಗಮ ನಿಯಮಿತದ ವ್ಯಾಪ್ತಿಗೆ 1999ರಲ್ಲಿ ಒಳಪಡಿಸಿ, ಸಾಕಷ್ಟು ಅನುದಾನವನ್ನು ಒದಗಿಸಿ, ಕಾಮಗಾರಿಗಳನ್ನು ತೀವ್ರಗೊಳಿಸಲಾಗಿದೆ. ಘಟಪ್ರಭಾ ಬಲದಂಡೆ ಕಾಲುವೆಯ ಕಿ.ಮೀ. 130ರಿಂದ 202ರ ವರೆಗೆ ಹಾಗೂ ಕಿ.ಮೀ. 120 ರಿಂದ ಬರುವ ಹಂಚು ಕಾಲುವೆಗಳ ಮತ್ತು ಮಲಪ್ರಭಾ ಬಲದಂಡೆ ಕಾಲುವೆಯ ಅಡಿ ಬರುವ ಬ್ಲಾಕ್ ಸಂ.54 ರಿಂದ 60ರ ಕೆಲಸಗಳನ್ನು ತೀವ್ರವಾಗಿ ಪೂರ್ಣಗೊಳಿಸಲು ಕಾಲುವೆಯ ಸರ್ವೇ, ಅಲೈನ್‌ಮೆಂಟ್ ವಿನ್ಯಾಸ, ಅಂದಾಜುಗಳನ್ನು ಮತ್ತು ಡಿ.ಟಿ.ಪಿ. ತಯಾರಿಸುವುದನ್ನು ಕನ್ಸಲ್ಟಂಟ್ ಗುತ್ತಿಗೆ ವಹಿಸಲಾಗಿದೆ.

ಕೆರೆಗಳ ಹೂಳೆತ್ತುವುದು

4483 - ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ವರ್ಷ ಹಾಗೂ ಈ ವರ್ಷದ ಆಯವ್ಯಯದಲ್ಲಿ ರಾಜ್ಯದ ಕೆರೆಗಳ ಹೂಳೆತ್ತಲು ಒದಗಿಸಲಾದ ಹಣ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಆ ಪೈಕಿ ಈಗಾಗಲೇ ಖರ್ಚು ಮಾಡಲಾದ ಹಣ ಎಷ್ಟು?

ಇ) ಬೆಳಗಾಂ ಜಿಲ್ಲೆಯಲ್ಲಿ ಕಳೆದ ವರ್ಷ ಹಾಗೂ ಈ ವರ್ಷ ಹೂಳೆತ್ತಲಾದ ಕೆರೆಗಳ ಸಂಖ್ಯೆ ಎಷ್ಟು? ಮತ್ತು ಈ ಉದ್ದೇಶಕ್ಕಾಗಿ ಖರ್ಚಾಗಿರುವ ಹಣ ಎಷ್ಟು? ಮತ್ತು ಯಾವ ಯಾವ ಕೆರೆಗಳ ಹೂಳೆತ್ತಲಾಗಿದೆ? (ವಿವರ ನೀಡುವುದು)

ಈ) ಬೆಳಗಾಂವ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಸಿದ್ದಸಮುದ್ರ ದೊಡ್ಡವಾಡ, ನನಗುಂಡಿಕೊಪ್ಪ ಹಾಗೂ ಸವದತ್ತಿ ತಾಲ್ಲೂಕಿನ ಹಿರೇಕೊಪ್ಪ ಮರಕುಂಬಿ, ಹಿರೇಮಾದನೂರ ಗ್ರಾಮಗಳ ಕೆರೆಗಳನ್ನು ಹೂಳೆತ್ತಲು ಕ್ರಮ ಕೈಗೊಳ್ಳಲಾಗುವುದೆ?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಕಳೆದ ವರ್ಷದ ಹಾಗೂ ಈ ವರ್ಷದ ಆಯವ್ಯಯದಲ್ಲಿ ಕೆರೆಗಳ ಹೂಳೆತ್ತಲು ಒದಗಿಸಲಾದ ಹಣದ ಜಿಲ್ಲಾವಾರು ವಿವರ ಲಗತ್ತಿಸಿರುವ ಅನುಬಂಧದಲ್ಲಿದೆ.

ಆ) ಆ ಪೈಕಿ ಈಗಾಗಲೇ ಖರ್ಚು ಮಾಡಲಾದ ಹಣ 1999-2000ನೇ ಸಾಲಿನಲ್ಲಿ ರೂ. 371.26 ಲಕ್ಷಗಳು 2000-01ನೇ ಸಾಲಿನಲ್ಲಿ ರೂ. 101.06 ಲಕ್ಷಗಳು.

ಇ) 1999-2000ರಲ್ಲಿ 4 ಕೆರೆಗಳ ಹೂಳೆತ್ತುವ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ. ಈ ವರ್ಷ ಕೆರೆಗಳಲ್ಲಿ ನೀರಿರುವುದರಿಂದ ಯಾವುದೇ ಕೆಲಸ ಇದುವರೆಗೆ ತೆಗೆದುಕೊಂಡಿರುವುದಿಲ್ಲ. 4 ಕೆರೆಗಳ ಹೂಳೆತ್ತುವ ಕಾಮಗಾರಿಗಳ ಸಲುವಾಗಿ ಒಟ್ಟು ರೂ. 2.77 ಲಕ್ಷ ಖರ್ಚಾಗಿರುತ್ತದೆ. ವಿವರ ಕೆಳಕಂಡಂತೆ ನೀಡಲಾಗಿದೆ.